Total No. of Questions : 55 ]

Code No. **01**

Total No. of Printed Pages : 7 ]

**June/July, 2011**

# KANNADA

Time : 3 Hours 15 Minutes ]

[ Max. Marks : 100

### ಅ- ವಿಭಾಗ

I. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ : 10 × 1 = 10

1) ದ್ರೌಪದಿಯ ವಸ್ತ್ರಾಪಹಾರ ಮಾಡಿದವನು ಯಾರು ?

2) ಕಾಡಿನಿಂದ ಬಂದ ಹುಡುಗ ಚಂದ್ರಮತಿಗೆ ಯಾವ ಸುದ್ದಿ ಕೊಟ್ಟನು ?

3) ಅವರಿವರ ತಲೆಯ ಹೇನು ಹೆಕ್ಕುವವಳು ಯಾರು ?

4) ಪೆಟ್ರೋಮ್ಯಾಕ್ಸ್ ಹೊತ್ತವರನ್ನು ಯಾರು ಮರೆತಿದ್ದಾರೆ ?

5) ಪ್ಯಾರಿಸ್ಸಿನಲ್ಲಿ ಲೇಖಕರು ಕಾರಿನಲ್ಲಿ ಹೊರಟ್ಟಿದ್ದು ಎಲ್ಲಿಗೆ ?

6) ಅನಿಸ್ಸಾಳ ತಂಗಿಯ ಹೆಸರೇನು ?

7) ಸುಮತಿಯು ತಂದೆಯನ್ನು ಯಾವ ರೀತಿ ಎಚ್ಚರಿಸಿದಳು ?

8) ಅರ್ಜುನನು ಏಕಲವ್ಯನನ್ನು ಏನೆಂದು ಕರೆಯುತ್ತಿದ್ದನು ?

9) ಬೇಡರಿಗೆ ಬಿಲ್ಲು ವಿದ್ಯೆ ಏನಾಗಿದೆ ?

10) ಯುಧಿಷ್ಠಿರನ ದೃಷ್ಟಿಯಲ್ಲಿ ನಿಜವಾದ ದುಷ್ಟತನ ಯಾವುದು ?

[ Turn over

## ಆ – ವಿಭಾಗ

II. ಅ) ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ : $4 \times 2 = 8$

11) ಮಾನವರ ಅಹಂಕಾರ ಗುಣವನ್ನು ದಾಸಿಮಯ್ಯ ಹೇಗೆ ಹೇಳಿದ್ದಾನೆ ?

12) ಮುಕ್ತಿಗಾಗಿ ಯಾರನ್ನು ಹೇಗೆ ಧ್ಯಾನ ಮಾಡಬೇಕು ?

13) ಪಶ್ಚಿಮಾಂಗನೆ ಗರ್ವಪಡಲು ಕಾರಣವೇನು ?

14) ರಾಮ, ಅಲ್ಲಾ ಎಲ್ಲಿದ್ದಾರೆಂದು ಕವಿ ಹೇಳಿದ್ದಾನೆ ?

15) ಮನೆಯಲ್ಲಿ ಸೂತಕದ ವಾತಾವರಣ ಉಂಟಾಗಲು ಕಾರಣವೇನು ?

ಆ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ : $3 \times 2 = 6$

16) ಫಾತಿಮಾ ಜೊಹರಾಬಾಯಿಗೆ ಏನು ಹೇಳುವಳು ?

17) ವಚನಕಾರರು ಸ್ವಂತಿಕೆಯನ್ನು ಹೇಗೆ ಕಾಪಾಡಿಕೊಂಡರು ?

18) ಮರಿಸ್ಸಾ ಹುಟ್ಟಿದ ತಕ್ಷಣ ಬೋನ್ ಮ್ಯಾರೋ ವರ್ಗಾವಣೆ ಮಾಡಲು ಏಕೆ ಸಾಧ್ಯವಿರಲಿಲ್ಲ ?

19) ಸುಧಾಮೆಯು ಬ್ರಹ್ಮ ರಾಕ್ಷಸನಿಗೆ ಏನೆಂದು ಹೇಳಿದಳು ?

ಇ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ : $3 \times 2 = 6$

20) ಏಕಲವ್ಯನನ್ನು ಗಾಳಣ್ಣ ಹೇಗೆ ಪರಿಚಯಿಸುತ್ತಾನೆ ?

21) ಮನೋವ್ಯಾಕುಲದಲ್ಲಿದ್ದ ಏಕಲವ್ಯನನ್ನು ತಾಯಿ ಹೇಗೆ ಸಮಾಧಾನಪಡಿಸುವಳು ?

22) ದ್ರೋಣಾಚಾರ್ಯರೇ ತನ್ನ ಗುರುಗಳು ಎಂದು ಏಕಲವ್ಯ ಹೇಗೆ ಸಾಧಿಸಿದನು ?

23) ಏಕಲವ್ಯ ನಿಜವಾದ ವೀರ ಎಂದು ಅರ್ಜುನನು ಹೇಳಿದ್ದು ಹೇಗೆ ?

## ಇ – ವಿಭಾಗ

III. ಅ) ಕೆಳಗಿನ ಯಾವುದಾದರೂ ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯಗಳನ್ನು ಬರೆಯಿರಿ : $2 \times 3 = 6$

24) ಈ ಪೊತ್ತೆನ್ನ ಕುಲದ ಕುಡಿ ಮುರುಟಿತು.

25) ತನ್ನ ಕುಂದಿನೊಳು ಕುಂದುವಳು.

26) ಬೆಳಕಿನಡಿಯ ಕತ್ತಲಲ್ಲಿ ಕತ್ತಲಾಗಿ ನಿಂತವರು.

ಆ) ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ : $1 \times 3 = 3$

27) ಅಲ್ಲಿಗೆ ಹೋಗಬೇಡಿ, ಬನ್ರೋ ಈ ಕಡೆ.

28) ಪ್ರಜ್ಞೆ ತಪ್ಪಿಸಲು ವೈದ್ಯರು ನಿನ್ನನ್ನು ಉಪಯೋಗಿಸಬಹುದಾಗಿದೆ.

[ Turn over

ಉ) ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ಬರೆಯಿರಿ : $1 \times 3 = 3$

29) ಜಗತ್ತಿನ ನಾಟಕ ರಂಗದಲ್ಲಿ ವಿಧಿಯ ಬರವಣಿಗೆಯನ್ನು ಮೀರುವವರು ಯಾರು ?

30) ನಿನ್ನ ಬಲಗೈ ಹೆಬ್ಬೆರಳನ್ನು ಕೊಡು ಏಕಲವ್ಯ.

## ಈ – ವಿಭಾಗ

IV. ಅ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $3 \times 4 = 12$

31) ಭೀಮನು ದುರ್ಯೋಧನನ್ನು ಮೂದಲಿಸಿದ ಬಗೆಯನ್ನು ವಿವರಿಸಿ.

32) ಅಸಂಗ್ರಹ ವೃತ್ತಿ, ದೃಢವಿಲ್ಲ ಭಕ್ತಿ ಮತ್ತು ಕಾರ್ಯ ಇವುಗಳ ಬಗ್ಗೆ ಲಕ್ಕಮ್ಮನ ವಿಚಾರಗಳನ್ನು ವಿವರಿಸಿ.

33) ಮಾನವ ನಿಜವಾಗಿ ಮಾಡಬೇಕಾದದ್ದೇನು, ಮಾಡುತ್ತಿರುವುದೇನು ಎಂಬುದನ್ನು ಕೀರ್ತನೆಯ ಹಿನ್ನೆಲೆಯಲ್ಲಿ ವಿವರಿಸಿ.

34) ಪಾಂಡವರು ಎಲ್ಲಿ, ಯಾವ ಕೆಲಸಗಳಲ್ಲಿ ತೊಡಗಿದ್ದರು ?

ಆ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $2 \times 4 = 8$

35) ಗಂಡ ನೀಡಿದ ತಲಾಖ್ ಕುರಿತು ಜೊಹರಾ ಹೇಗೆ ಚಿಂತಿಸುತ್ತಾಳೆ ?

36) ಕವಿರಾಜಮಾರ್ಗದ ವೈಶಿಷ್ಟ್ಯಗಳನ್ನು ಲೇಖಕರು ಹೇಗೆ ವಿವರಿಸಿದ್ದಾರೆ ?

37) ಅನಿಸ್ಸಾಳ ತಂದೆ ತಾಯಿಗಳಿಗೆ ಅವಳನ್ನು ಉಳಿಸಿಕೊಳ್ಳುವ ಉಪಾಯಕ್ಕೆ ಎದುರಾದ ಸಮಸ್ಯೆಗಳು ಯಾವುವು ? ವಿವರಿಸಿ.

ಇ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $2 \times 4 = 8$

38) ಹಾಡುಗಾರರು ಏಕಲವ್ಯನ ಕಥೆಯನ್ನು ಏನೆಂದು ಬಣ್ಣಿಸಿದ್ದಾರೆ ? ವಿವರಿಸಿ.

39) ಯುದ್ಧ ಮಾಡಲು ಯುಧಿಷ್ಠಿರನನ್ನು ಕೃಷ್ಣ ಹೇಗೆ ಒಪ್ಪಿಸುತ್ತಾನೆ ?

40) 'ಕುರುಕ್ಷೇತ್ರ ಉಳ್ಳವರ ನಡುವಿನ ಕಚ್ಚಾಟ'. ಏಕಲವ್ಯನ ಧೋರಣೆಯಿಂದ ಈ ಮಾತನ್ನು ವಿವರಿಸಿ.

## ಉ – ವಿಭಾಗ

V. ಅ) ಕೆಳಗಿನ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ : $1 \times 5 = 5$

41) ಕರಿಯನಿತ್ತಡೆ ಒಲ್ಲೆ, ಸಿರಿನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯ ಒಂದರಘಳಿಗೆಯಿತ್ತಡೆ
ನಿನ್ನನಿತ್ತೆ ಕಾಣಾ ! ರಾಮನಾಥ

ಅಥವಾ

42) ಬೆದರುವ ಮುದ್ದುವೆಣ್ಣಿಗೆ ಭೀತಿಗಳೆನಂತೆ
ಪದಳಗೆಯ್ಯದೆ ಬಲ್ಮೆದೋರೆ
ಸೊದೆಯುಂಡು ಸೊರ್ಕುವ ಜೊನ್ನವಕ್ಕಿಗೆ ಬಿಸು
ಗದಿರನೂಡುವ ಗೈಮೆಯಂತೆ

ಆ) **ಭಾಷಾಭ್ಯಾಸ**

ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಆಯಾ ಸೂಚನೆಗೆ ಅನುಗುಣವಾಗಿ ಉತ್ತರ ಬರೆಯಿರಿ : 6 × 2 = 12

43) ಈ ಪದಗಳಿಗೆ ಅರ್ಥಗಳನ್ನು ಬರೆಯಿರಿ :

ಮುರುಟು, ಒತ್ತಿಗೆ.

44) ಈ ಪದಗಳಿಗೆ ತತ್ಸಮ – ತದ್ಭವಗಳನ್ನು ಬರೆಯಿರಿ :

ಕಪಿಲೆ, ಮತ್ಸರ.

45) ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ :

ಕಾಂತಾರ, ಕೇತನ.

46) ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ :

ಗಂಟಲುಕಟ್ಟು, ತೊಡೆತಟ್ಟು.

47) ಈ ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ :

ಅಜ, ಅರಿ.

48) ಈ ಪದಗಳಿಗೆ ವಿಭಕ್ತಿಯನ್ನು ಬರೆಯಿರಿ :

ರಮೇಶನಿಂದ, ರಮೇಶನಲ್ಲಿ.

49) ಅನ್ವರ್ಥನಾಮಕ್ಕೆ ಎರಡು ಉದಾಹರಣೆ ಕೊಡಿ.

ಇ) ಕೆಳಗಿನ ಯಾವುದಾದರೂ ಒಂದನ್ನು ಕುರಿತು 15 ವಾಕ್ಯಗಳಿಗೆ ಮೀರದಂತೆ ಒಂದು ಪ್ರಬಂಧವನ್ನು ಬರೆಯಿರಿ : 1 × 5 = 5

50) ರೈತರ ಸಮಸ್ಯೆಗಳು

51) ಇಂದಿನ ರಾಜಕಾರಣಿಗಳು

ಈ) ಪತ್ರಲೇಖನ

ಈ ಕೆಳಗಿನ ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ : $1 \times 4 = 4$

52) ಮಳೆಯಿಂದ ಕೆಟ್ಟುಹೋದ ರಸ್ತೆ ದುರಸ್ತಿಗಾಗಿ ಜಿಲ್ಲಾ ಪಂಚಾಯತಿ ಕಾರ್ಯದರ್ಶಿಗಳಿಗೆ ಒಂದು ಪತ್ರ ಬರೆಯಿರಿ.

53) ಶೈಕ್ಷಣಿಕ ಪ್ರವಾಸಕ್ಕೆ ತಂದೆಯ ಅನುಮತಿ ಕೋರಿ ಒಂದು ಪತ್ರ ಬರೆಯಿರಿ.

ಉ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ : $1 \times 4 = 4$

54) ಆಯ ನೋಡಿ ಪಾಯ ಹಾಕು.

55) ಮನೆಗೆ ಮಾರಿ, ಪರರಿಗೆ ಉಪಕಾರಿ.